RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-I<br>Part-I | ಬೆಂಗಳೂರು, ಶುಕ್ರವಾರ, ಜುಲೈ ೦೮, ೨೦೧೬ (ಆಷಾಢ ೧೭, ಶಕ ವರ್ಷ ೧೯೩೮)<br>**Bengaluru, Friday, July 08, 2016 (Ashada 17 Shaka Varsha 1938)** | ನಂ. ೯೦೦<br>**No. 900** |
|---|---|---|

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

### ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಸರ್ಕಾರದ ಸಚಿವಾಲಯವನ್ನೊಳಗೊಂಡಂತೆ ಸರ್ಕಾರದ ಎಲ್ಲಾ ಕ್ಷೇತ್ರ ಇಲಾಖೆಗಳು/ಶಾಸನಬದ್ಧ ಸಂಸ್ಥೆಗಳು/ವಿಭಾಗ/ಜಿಲ್ಲಾ ಮಟ್ಟದ ಕಚೇರಿಗಳಲ್ಲಿ ಸೃಜಿಸಲಾಗಿರುವ ಜಾಗೃತ ಕೋಶಗಳ (Vigilance Cells) ಮುಖ್ಯಸ್ಥರಾದ **ಮುಖ್ಯ ಜಾಗೃತ ಅಧಿಕಾರಿ** ಹಾಗು **ಜಾಗೃತ ಅಧಿಕಾರಿಗಳ** ಕರ್ತವ್ಯಗಳನ್ನು ನಿರ್ದಿಷ್ಟಪಡಿಸುವ ಕುರಿತು.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 14 ಸೇಲೋಇಯು 2016, ದಿನಾಂಕ:14.03.2016.
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 88 ಸೇಲೋಇಯು 2016, ದಿನಾಂಕ:22.06.2016.

ಪ್ರಸ್ತಾವನೆ:-

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:14.03.2016ರ ಆದೇಶದನ್ವಯ, ರಾಜ್ಯದಲ್ಲಿ ಭ್ರಷ್ಟಾಚಾರ ತಡೆ ಅಧಿನಿಯಮ, 1988ನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಾಗೂ ಸ್ವತಂತ್ರವಾಗಿ ತನಿಖೆ ನಡೆಸಲು ಒಂದು ಪ್ರತ್ಯೇಕ ಭ್ರಷ್ಟಾಚಾರ ನಿಗ್ರಹ ದಳ(Anti Corruption Bureau)ವನ್ನು ಸೃಜಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ:22.06.2016ರ ಆದೇಶದಲ್ಲಿ, ಭ್ರಷ್ಟಾಚಾರ ನಿಗ್ರಹ ದಳವನ್ನು ಸೃಜಿಸಿ, ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 14 ಸೇಲೋಇಯು 2016, ದಿನಾಂಕ:14.03.2016ರ ಆದೇಶ ಭಾಗದ ಕಂಡಿಕೆ 7ರನ್ವಯ ಸರ್ಕಾರದ ಪ್ರತಿಯೊಂದು ಇಲಾಖೆ ಮತ್ತು ಇಂಜಿನಿಯರಿಂಗ್ ಇಲಾಖೆಯನ್ನೊಳಗೊಂಡಂತೆ ನಿರ್ದೇಶನಾಲಯ/ಆಯುಕ್ತಾಲಯ, ಕ್ಷೇತ್ರ ಇಲಾಖೆ, ಸಾರ್ವಜನಿಕ ಉದ್ದಿಮೆಗಳು, ಸರ್ಕಾರದಿಂದ ಸ್ಥಾಪಿತವಾದ ನಿಗಮ/ಮಂಡಳಿಗಳು ಮತ್ತು ವಿಧಾನ ಮಂಡಲದ ಅಧಿನಿಯಮದಡಿ ಸ್ಥಾಪಿತವಾಗಿರುವ ಸ್ಥಳೀಯ ಸಂಸ್ಥೆಗಳು ಹಾಗು ಎಲ್ಲಾ ಶಾಸನಬದ್ಧ ಸಂಸ್ಥೆಗಳಲ್ಲಿ ಜಾಗೃತ ಕೋಶಗಳನ್ನು ಚಾಲನೆಗೊಳಿಸುವ ನಿಟ್ಟಿನಲ್ಲಿ ಕಾರ್ಯವಿಧಾನ/ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಸದರಿ ಆದೇಶದಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿ ಒಂದು ಜಾಗೃತ ಕೋಶ ಇರತಕ್ಕದ್ದೆಂದೂ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳ ನಂತರದ (officer next in seniority) ಅಧಿಕಾರಿಯನ್ನು ಸದರಿ ಜಾಗೃತ ಕೋಶದ ಮುಖ್ಯ ಜಾಗೃತ ಅಧಿಕಾರಿ (Chief Vigilance Officer)ಯನ್ನಾಗಿ ನೇಮಿಸಲು ಆದೇಶಿಸಲಾಗಿದೆ.

ಅದೇ ರೀತಿ ಸರ್ಕಾರದ ಎಲ್ಲಾ ಕ್ಷೇತ್ರ ಇಲಾಖೆಗಳು/ಶಾಸನಬದ್ಧ ಸಂಸ್ಥೆಗಳ ಕೇಂದ್ರಸ್ಥಾನದ ಕಚೇರಿಗಳಲ್ಲಿ ಒಂದು ಜಾಗೃತ ಕೋಶ ಇರತಕ್ಕದ್ದೆಂದೂ ಹಾಗೂ ಆಯಾ ಇಲಾಖಾ/ಶಾಸನಬದ್ಧ ಸಂಸ್ಥೆಗಳ ಮುಖ್ಯಸ್ಥರ ನಂತರದ ಅಧಿಕಾರಿಯನ್ನು (officer next in seniority) ಮುಖ್ಯ ಜಾಗೃತ ಅಧಿಕಾರಿ(Chief Vigilance Officer)ಯನ್ನಾಗಿ ನೇಮಿಸಲು ಆದೇಶಿಸಲಾಗಿದೆ.

ಹಾಗೂ ಸರ್ಕಾರದ ಎಲ್ಲಾ ಕ್ಷೇತ್ರ ಇಲಾಖೆಗಳು/ಶಾಸನಬದ್ಧ ಸಂಸ್ಥೆಗಳು ವಿಭಾಗ ಮತ್ತು ಜಿಲ್ಲಾ ಮಟ್ಟದಲ್ಲಿ ಕಚೇರಿಗಳನ್ನು ಹೊಂದಿದ್ದು, ಸದರಿ ಕಚೇರಿಗಳಲ್ಲಿ ಗಣನೀಯ ಸಿಬ್ಬಂದಿ (reasonable strength) ಇದ್ದಲ್ಲಿ, ಆ ವಿಭಾಗ/ಜಿಲ್ಲಾ ಮಟ್ಟದ ಕಚೇರಿಗಳಲ್ಲಿ ಒಂದು ಜಾಗೃತ ಕೋಶ ಇರತಕ್ಕದ್ದೆಂದೂ, ಹಾಗೂ ಸದರಿ ವಿಭಾಗ/ಜಿಲ್ಲಾ ಮಟ್ಟದ ಕಚೇರಿಯ ಮುಖ್ಯಸ್ಥರ ನಂತರದ ಅಧಿಕಾರಿಯನ್ನು (officer next in seniority) ಜಾಗೃತ ಅಧಿಕಾರಿ(Vigilance Officer)ಯನ್ನಾಗಿ ನೇಮಿಸಲು ಆದೇಶಿಸಲಾಗಿದೆ.

ಜಾಗೃತ ಕೋಶಗಳ ಮುಖ್ಯಸ್ಥರಾಗಿರುವ ಮುಖ್ಯ ಜಾಗೃತ ಅಧಿಕಾರಿ ಹಾಗೂ ಜಾಗೃತ ಅಧಿಕಾರಿಗಳ ಕರ್ತವ್ಯಗಳನ್ನು ನಿರ್ದಿಷ್ಟಪಡಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 88 ಸೇಲೋಇಯು 2016 (ಭಾಗ-1), ಬೆಂಗಳೂರು, ದಿನಾಂಕ:06.07.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಸಚಿವಾಲಯವನ್ನೊಳಗೊಂಡಂತೆ ಸರ್ಕಾರದ ಎಲ್ಲಾ ಕ್ಷೇತ್ರ ಇಲಾಖೆಗಳು/ಶಾಸನಬದ್ಧ ಸಂಸ್ಥೆಗಳು/ವಿಭಾಗ/ಜಿಲ್ಲಾ ಮಟ್ಟದ ಕಚೇರಿಗಳಲ್ಲಿ ಸೃಜಿಸಲಾಗಿರುವ ಜಾಗೃತ ಕೋಶಗಳ (Vigilance Cells) ಮುಖ್ಯಸ್ಥರಾದ **ಮುಖ್ಯ ಜಾಗೃತ ಅಧಿಕಾರಿ** ಹಾಗು **ಜಾಗೃತ ಅಧಿಕಾರಿಗಳ** ಕರ್ತವ್ಯಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಲಾಗಿದೆ:-

**(ಅ) ಮುಂಜಾಗ್ರತಾ ಕ್ರಮಗಳಿಗೆ** (Preventive Vigilance) **ಸಂಬಂಧಿಸಿದಂತೆ ಮುಖ್ಯ ಜಾಗೃತ ಅಧಿಕಾರಿ ಹಾಗು ಜಾಗೃತ ಅಧಿಕಾರಿಗಳ ಕರ್ತವ್ಯಗಳು:-**

(1) ಭ್ರಷ್ಟಾಚಾರ ಅಥವಾ ಅಕ್ರಮಗಳ ವ್ಯಾಪ್ತಿಯನ್ನು ತೊಡೆದುಹಾಕಲು ಅಥವಾ ಕಡಿಮೆ ಮಾಡುವ ದೃಷ್ಟಿಯಿಂದ, ಇಲಾಖೆಗಳು/ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿರುವ ನಿಯಮಾವಳಿಗಳು ಹಾಗೂ ಕಾರ್ಯ ವಿಧಾನಗಳನ್ನು ವಿವರವಾಗಿ ಪರಿಶೀಲಿಸುವುದು.

(2) ವ್ಯವಸ್ಥೆಯ ವೈಫಲ್ಯಗಳು ಮತ್ತು ಭ್ರಷ್ಟಾಚಾರ ಅಥವಾ ಅಕ್ರಮಗಳ ಅಸ್ತಿತ್ವವನ್ನು ಪತ್ತೆ ಹಚ್ಚಲು ಅನಿರೀಕ್ಷಿತ ತಪಾಸಣೆ ಮತ್ತು ನಿಯಮಿತ ತಪಾಸಣೆಗಳನ್ನು ಕಾಲಕಾಲಕ್ಕೆ ಹೊರಡಿಸಲಾದ ಆಯಾ ಇಲಾಖೆಗಳ ಸುತ್ತೋಲೆಗಳನ್ವಯ ಸಂಬಂಧಪಟ್ಟ ಅಧಿಕಾರಿಗಳು ಅನುಷ್ಠಾನಗೊಳಿಸುವುದನ್ನು ಖಚಿತಪಡಿಸಿಕೊಂಡು ಈ ಬಗ್ಗೆ ಮಾಹಿತಿಯನ್ನು ಕ್ರೋಢೀಕರಿಸಿ, ಲಗತ್ತಿಸಿದ **ನಮೂನೆಯಲ್ಲಿನ ಪಟ್ಟಿ-1**ರಲ್ಲಿ ಸಲ್ಲಿಸುವುದು.

**(ಆ) ದಂಡನಾತ್ಮಕ ಕ್ರಮಗಳಿಗೆ** (Punitive Vigilance) **ಸಂಬಂಧಿಸಿದಂತೆ ಮುಖ್ಯ ಜಾಗೃತ ಅಧಿಕಾರಿ ಹಾಗು ಜಾಗೃತ ಅಧಿಕಾರಿಗಳ ಕರ್ತವ್ಯಗಳು:-**

(1) ಭ್ರಷ್ಟಾಚಾರ ನಿಗ್ರಹದಳ ಅಥವಾ ಇತರೆ ತನಿಖಾ ಸಂಸ್ಥೆಗಳು ಯಾವುದೇ ಅಧಿಕಾರಿಯ ಬಗ್ಗೆ ಮಾಹಿತಿ/ಅನುಮತಿ/ಅಭಿಪ್ರಾಯ/ಸ್ಪಷ್ಟೀಕರಣ/ದಾಖಲೆಗಳನ್ನು ಕೋರಿದಾಗ, 15 ದಿನಗಳೊಳಗೆ ಮಾಹಿತಿ ನೀಡಲು ಕ್ರಮ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು; ಒಂದು ವೇಳೆ ಮಾಹಿತಿಯನ್ನು 15 ದಿನಗಳೊಳಗೆ ನೀಡದಿದ್ದಲ್ಲಿ, ವಿಷಯವು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು/ಕಾರ್ಯದರ್ಶಿಯ ಹಂತಕ್ಕೆ ವರ್ಗಾಯಿಸಲ್ಪಡುತ್ತದೆ ಹಾಗೂ ಒಟ್ಟಾರೆ 30 ದಿನಗಳೊಳಗಾಗಿ ಮಾಹಿತಿ ನೀಡುವುದು ಕಡ್ಡಾಯವಾಗಿರುತ್ತದೆ.

(2) ಭ್ರಷ್ಟಾಚಾರ ನಿಗ್ರಹದಳ ಅಥವಾ ಇತರೆ ತನಿಖಾ ಸಂಸ್ಥೆಗಳು ಅಭಿಯೋಜನಾ ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳನ್ನು ನಿಗದಿತ ಅವಧಿಯೊಳಗೆ ವಿಲೇಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು. ಹಾಗು ಈ ಸಂಬಂಧದ ಪ್ರಗತಿ ವರದಿಯನ್ನು ಲಗತ್ತಿಸಿದ **ನಮೂನೆಯಲ್ಲಿನ ಪಟ್ಟಿ-3**ರಲ್ಲಿ ಸಲ್ಲಿಸುವುದು.

(3) ಭ್ರಷ್ಟಾಚಾರ ನಿಗ್ರಹದಳ ಅಥವಾ ಇತರೆ ತನಿಖಾ ಸಂಸ್ಥೆಗಳು ಅಮಾನತ್ತು/ವರ್ಗಾವಣೆಗೆ ಶಿಫಾರಸ್ಸು ಮಾಡುವ ಪ್ರಕರಣಗಳಲ್ಲಿ ತುರ್ತು ಕ್ರಮ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು;

(4) ಮಾನ್ಯ ರಾಜ್ಯಪಾಲರು/ಮಾನ್ಯ ಮುಖ್ಯಮಂತ್ರಿಯವರ ಕಚೇರಿ/ಜನಸ್ಪಂದನ ವಿಭಾಗ/ ಸಾರ್ವಜನಿಕರಿಂದ ಸ್ವೀಕರಿಸಲಾದ/ಇಲಾಖೆಯಲ್ಲಿ ಸ್ವಯಂ ಪ್ರೇರಿತವಾಗಿ ದಾಖಲಿಸಲಾಗುವ ಜಾಗೃತ ವಿಷಯಗಳಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸುವುದು. ಸದರಿ ದೂರುಗಳನ್ನು ಪರಿಶೀಲಿಸಿ, ದೂರುಗಳ ತೀವ್ರತೆಯನ್ನಾಧರಿಸಿ, ಭ್ರಷ್ಟಾಚಾರ ನಿಗ್ರಹದಳ ಅಥವಾ ಲೋಕಾಯುಕ್ತ ಸಂಸ್ಥೆ ಅಥವಾ ಇಲಾಖಾ ವಿಚಾರಣೆಗೆ ವಹಿಸುವ ಬಗ್ಗೆ ಅಥವಾ ಇನ್ಯಾವುದೇ ಸೂಕ್ತ ಕ್ರಮವನ್ನು ಸಮುಚಿತ ಮಾರ್ಗದಲ್ಲಿ ತೆಗೆದುಕೊಳ್ಳುವಂತೆ ನೋಡಿಕೊಳ್ಳುವುದು. ಹಾಗು ಈ ವಿಚಾರದಲ್ಲಿ ಸಂದೇಹವಿದ್ದಲ್ಲಿ ವಿಷಯವನ್ನು ಸಂಬಂಧಪಟ್ಟ ಆಡಳಿತ ಮುಖ್ಯಸ್ಥರಿಗೆ ಸಲ್ಲಿಸುವುದು. ಸದರಿ ಪ್ರಕರಣಗಳ ಪ್ರಗತಿಯನ್ನು ಆಗಿಂದ್ದಾಗ್ಗೆ ಗಮನಿಸಿ ಲಗತ್ತಿಸಿದ **ನಮೂನೆಯಲ್ಲಿನ ಪಟ್ಟಿ–2ರಲ್ಲಿ** ಸಲ್ಲಿಸುವುದು. ಅಲ್ಲದೇ, ಸಾಮಾನ್ಯವಾಗಿ ಕೆಳಕಂಡ ರೀತಿಯ ಪ್ರಕರಣಗಳನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ತನಿಖೆಗಾಗಿ ವಹಿಸಲು ಕ್ರಮ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು;

(i) ಲಂಚ, ಭ್ರಷ್ಟಾಚಾರ, ಫೋರ್ಜರಿ, ವಂಚನೆ, ವಿಶ್ವಾಸ ವಂಚನೆ (criminal breach of trust) ಖೊಟ್ಟಿ ದಾಖಲಾತಿ ಇತ್ಯಾದಿ ಆರೋಪಗಳಿಗೆ ಸಂಬಂಧಿಸಿದ ದೂರುಗಳು;

(ii) ಅಕ್ರಮ ಆಸ್ತಿ ಪ್ರಕರಣಗಳಿಗೆ ಸಂಬಂಧಿಸಿದ ದೂರುಗಳು;

(iii) ತಜ್ಞ ಪೋಲೀಸ್ ತನಿಖೆಯ ಅವಶ್ಯಕತೆ ಇರುವ ಸಂಕೀರ್ಣ ಸ್ವರೂಪದ ಪ್ರಕರಣಗಳು;

(5) ಇಲಾಖಾ ವಿಚಾರಣಾ ಪ್ರಕರಣಗಳಲ್ಲಿ ವಿಚಾರಣಾಧಿಕಾರಿ ಹಾಗು ಮಂಡನಾಧಿಕಾರಿಗಳನ್ನು ಆಯಾ ಶಿಸ್ತು ಪ್ರಾಧಿಕಾರಿಗಳು ನೇಮಿಸುವಲ್ಲಿ ಯಾವುದೇ ವಿಳಂಬ ಆಗದಿರುವುದನ್ನು ಖಚಿತಪಡಿಸಿಕೊಳ್ಳುವುದು; ಹಾಗೂ ವಿಚಾರಣಾಧಿಕಾರಿಗಳ ವಿಚಾರಣಾ ವರದಿಗಳ ಮೇಲೆ ಶಿಸ್ತು ಪ್ರಾಧಿಕಾರಿಗಳು ಅಂತಿಮ ಆದೇಶಗಳನ್ನು ಸೂಕ್ತವಾದ ರೀತಿಯಲ್ಲಿ ಹಾಗು ಸಕಾಲದಲ್ಲಿ ಹೊರಡಿಸುವುದನ್ನು ಖಚಿತಪಡಿಸಿಕೊಳ್ಳುವುದು; ಇಲಾಖಾ ವಿಚಾರಣಾ ಪ್ರಕರಣಗಳ ಪ್ರಗತಿಯನ್ನು ಆಗ್ಗಿಂದ್ದಾಗ್ಗೆ ಗಮನಿಸಿ (monitor), ಈ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಮಾಹಿತಿ ಪಡೆದು ಲಗತ್ತಿಸಿದ **ನಮೂನೆಯಲ್ಲಿನ ಪಟ್ಟಿ–4ರಲ್ಲಿ** ಸಲ್ಲಿಸುವುದು. ಹಾಗೂ ಇಲಾಖಾ ವಿಚಾರಣಾ ಪ್ರಕರಣಗಳಲ್ಲಿ ಅನಗತ್ಯ ವಿಳಂಬವಾಗುತ್ತಿದ್ದಲ್ಲಿ, ಇದನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು, ಸದರಿ ಪ್ರಕರಣಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮಕೈಗೊಳ್ಳುವುದು.

ಸರ್ಕಾರದ ಎಲ್ಲಾ ಕ್ಷೇತ್ರ ಇಲಾಖೆ/ಶಾಸನಬದ್ಧ ಸಂಸ್ಥೆಗಳ **ಮುಖ್ಯ ಜಾಗೃತ ಅಧಿಕಾರಿಗಳು** ತಮ್ಮ ಅಧೀನ ಕಚೇರಿಗಳ **ಜಾಗೃತ ಅಧಿಕಾರಿಗಳಿಂದ** ದೂರುಗಳು/ಜಾಗೃತ ಪ್ರಕರಣಗಳ ವಿಲೇ ಹಾಗೂ ಬಾಕಿ ಪ್ರಕರಣಗಳ ಅಂಕಿ ಅಂಶಗಳ ವರದಿಯನ್ನು ಈ ಆದೇಶಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ತ್ರೈಮಾಸಿಕವಾಗಿ ಪಡೆಯತಕ್ಕದ್ದು. ಹಾಗೂ ಕರ್ನಾಟಕ ಸರ್ಕಾರದ ಸಚಿವಾಲಯದ ಎಲ್ಲಾ ಇಲಾಖೆಗಳ **ಮುಖ್ಯ ಜಾಗೃತ ಅಧಿಕಾರಿಗಳು** ತಮ್ಮ ಆಡಳಿತ ವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರ ಇಲಾಖೆಗಳ **ಮುಖ್ಯ ಜಾಗೃತ ಅಧಿಕಾರಿಗಳಿಂದ** ಲಗತ್ತಿಸಿರುವ ನಮೂನೆಯಲ್ಲಿ ಮಾಹಿತಿಯನ್ನು ಪಡೆದು ಕ್ರೋಢೀಕರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಜಾಗೃತ ವಿಭಾಗಕ್ಕೆ **ತ್ರೈಮಾಸಿಕ** ವರದಿಯನ್ನು ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ ಮತ್ತು ಅವರ ಹೆಸರಿನಲ್ಲಿ,

**ಉಮಾ. ಕೆ.**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಜಾಗೃತ ವಿಭಾಗ).

## ಮುಖ್ಯ ಜಾಗೃತಾ ಅಧಿಕಾರಿಗಳು ಹಾಗೂ ಜಾಗೃತ ಅಧಿಕಾರಿಗಳು ಸಲ್ಲಿಸಬೇಕಾದ ತ್ರೈಮಾಸಿಕ ವರದಿ

## ಪ್ರಪತ್ರ

ಅ. ಮುಂಜಾಗ್ರತಾ ಕ್ರಮಗಳು (Preventive Vigilance)

1. ಮುಖ್ಯ ಜಾಗೃತ ಅಧಿಕಾರಿ/ಜಾಗೃತ ಅಧಿಕಾರಿಗಳು ಕಳುಹಿಸಬೇಕಾದ ತನಿಖೆ/ತಪಾಸಣೆಗಳ ವಿವರ

| ತನಿಖೆಯ ರೀತಿ | ಕಳೆದ ತ್ರೈಮಾಸಿಕದ ಅಂತ್ಯಕ್ಕೆ ಮಾಡಿದ ತನಿಖೆಗಳು | ಪ್ರಸ್ತುತ ತ್ರೈಮಾಸಿಕದಲ್ಲಿ ಮಾಡಿದ ತನಿಖೆಗಳು | ಷರಾ |
|---|---|---|---|
| ಕಾಲಕಾಲಕ್ಕೆ | | | |
| ಅನಿರೀಕ್ಷಿತ ತಪಾಸಣೆಗಳು | | | |
| ಮೇಜರ್ ವರ್ಕ್ಸ್ | | | |
| ಒಟ್ಟು | | | |

(ಆ) ದಂಡನಾತ್ಮಕ ಕ್ರಮಗಳು (Punitive Vigilance)

2. ಸ್ವೀಕರಿಸಿದ ದೂರುಗಳು

| ಸ್ವೀಕರಿಸಿದ ಮೂಲ | ಆರಂಭಿಕ ಬಾಕಿ | ಪ್ರಸ್ತುತ ಅವಧಿಯಲ್ಲಿ ಸ್ವೀಕರಿಸಿದ ದೂರುಗಳು | ಒಟ್ಟು | ಪ್ರಸ್ತುತ ಅವಧಿಯಲ್ಲಿ ವಿಲೇ ಮಾಡಿದ ದೂರುಗಳು | ಬಾಕಿಯಿರುವ ದೂರುಗಳು | ಬಾಕಿ ದೂರುಗಳು | | |
|---|---|---|---|---|---|---|---|---|
| | | | | | | 1ರಿಂದ 6 ತಿಂಗಳು | 6ರಿಂದ 12 ತಿಂಗಳು | 12 ತಿಂಗಳಿಗಿಂತ ಮೇಲ್ಪಟ್ಟು |
| (1) | (2) | (3) | (4) (2+3=4) | (5) | (6) (4-5=6) | (7) | (8) | (9) |
| ಮಾನ್ಯ ರಾಜ್ಯಪಾಲರ ಕಚೇರಿ | | | | | | | | |
| ಮಾನ್ಯ ಮುಖ್ಯ ಮಂತ್ರಿಯವರ ಕಚೇರಿ | | | | | | | | |
| ಜನಸ್ಪಂದನ ವಿಭಾಗ | | | | | | | | |
| ಸ್ವಯಂ ಪ್ರೇರಿತ | | | | | | | | |
| ಇತರೆ | | | | | | | | |
| ಒಟ್ಟು | | | | | | | | |

3. **ಅಭಿಯೋಜನಾ ಮಂಜೂರಾತಿಗಳು**

| ಆರಂಭಿಕ ಬಾಕಿ | ಪ್ರಸ್ತುತ ಅವಧಿಯಲ್ಲಿ ಸ್ವೀಕರಿಸಿದವು | ಒಟ್ಟು | ಪ್ರಸ್ತುತ ಅವಧಿಯಲ್ಲಿ ವಿಲೇ ಮಾಡಿದವು | | | ಬಾಕಿಯಿರುವ ಪ್ರಸ್ತಾವನೆಗಳು | ಬಾಕಿ ಪ್ರಕರಣಗಳು | | |
|---|---|---|---|---|---|---|---|---|---|
| | | | ಮಂಜೂರಾತಿ ನೀಡಿದ ಪ್ರಕರಣಗಳು | ತಿರಸ್ಕರಿಸಿದ ಪ್ರಕರಣಗಳು | ಒಟ್ಟು | | 1ರಿಂದ 6 ತಿಂಗಳು | 6ರಿಂದ 12 ತಿಂಗಳು | 12 ತಿಂಗಳಿಗಿಂತ ಮೇಲ್ಪಟ್ಟು |
| (1) | (2) | (3) | (4) | (5) | (6) (4+5=6) | (7) (3-6=7) | (8) | (9) | (10) |
| | | | | | | | | | |

4. **<u>ಇಲಾಖಾ ವಿಚಾರಣೆಗಳು</u>**

**(ಅ) ಲೋಕಾಯುಕ್ತಕ್ಕೆ ವಹಿಸಿದ ಪ್ರಕರಣಗಳು**

| ಆರಂಭಿಕ ಬಾಕಿ | ಪ್ರಸ್ತುತ ಅವಧಿ ಯಲ್ಲಿ ವಹಿಸಿದ ಪ್ರಕರಣ ಗಳು | ಒಟ್ಟು ಪ್ರಕರಣ ಗಳು | ಪ್ರಸ್ತುತ ಅವಧಿಯಲ್ಲಿ ಲೋಕಾಯುಕ್ತ ದಿಂದ ಅಂತಿಮ ವರದಿ ಸ್ವೀಕೃತವಾದ ಪ್ರಕರಣಗಳು | ಪ್ರಸ್ತುತ ಅವಧಿಯಲ್ಲಿ ಶಿಸ್ತು ಪ್ರಾಧಿಕಾರ ದಿಂದ ಅಂತಿಮ ಆದೇಶ ಹೊರಡಿಸಿದ ಪ್ರಕರಣಗಳು | ಬಾಕಿಯಿರುವ ಪ್ರಕರಣಗಳು | ಬಾಕಿ ಪ್ರಕರಣಗಳು | | |
|---|---|---|---|---|---|---|---|---|
| (1) | (2) | (3) | (4) | (5) | (6) (3-5=6) | (7) | (8) | (9) |
| | | | | | | 1ರಿಂದ 6 ತಿಂಗಳು | 6ರಿಂದ 12 ತಿಂಗಳು | 12 ತಿಂಗಳಿಗಿಂತ ಮೇಲ್ಪಟ್ಟು |
| | | | | | | | | |

**(ಆ) ಆಂತರಿಕವಾಗಿ ಇಲಾಖಾ ವಿಚಾರಣೆಗೆ ವಹಿಸಿದ ಪ್ರಕರಣಗಳ ವಿವರ**

| ಆರಂಭಿಕ ಬಾಕಿ | ಪ್ರಸ್ತುತ ಅವಧಿಯಲ್ಲಿ ಇಲಾಖಾ ವಿಚಾರಣೆಗೆ ವಹಿಸಿದ ಪ್ರಕರಣ ಗಳು | ಒಟ್ಟು ಪ್ರಕರಣ ಗಳು | ಪ್ರಸ್ತುತ ಅವಧಿಯಲ್ಲಿ ವಿಚಾರಣಾಧಿ ಕಾರಿಯಿಂದ ಅಂತಿಮ ವರದಿ ಸ್ವೀಕೃತವಾದ ಪ್ರಕರಣಗಳು | ಪ್ರಸ್ತುತ ಅವಧಿಯಲ್ಲಿ ಶಿಸ್ತು ಪ್ರಾಧಿಕಾರ ದಿಂದ ಅಂತಿಮ ಆದೇಶ ಹೊರಡಿಸಿದ ಪ್ರಕರಣಗಳು | ಬಾಕಿಯಿರುವ ಪ್ರಕರಣ ಗಳು | ಬಾಕಿ ಪ್ರಕರಣಗಳು | | |
|---|---|---|---|---|---|---|---|---|
| (1) | (2) | (3) | (4) | (5) | (6)<br>(3-5=6) | (7) | (8) | (9) |
| | | | | | | 1ರಿಂದ 6 ತಿಂಗಳು | 6ರಿಂದ 12 ತಿಂಗಳು | 12 ತಿಂಗಳಿಗಿಂತ ಮೇಲ್ಪಟ್ಟು |
| | | | | | | | | |

ಸ್ಥಳ: ಮುಖ್ಯ ಜಾಗೃತಾ ಅಧಿಕಾರಿ/ಜಾಗೃತ ಅಧಿಕಾರಿ ಸಹಿ

ದಿನಾಂಕ: ಹೆಸರು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) 500 ಪ್ರತಿಗಳು